**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 11

**CW**. 21

**ಸಾಕ್ಷಿಯ ಹೆಸರು –ರವಿಕುಮಾರ ಕೆ ಎಸ್**

**ತಂದೆಯ ಹೆಸರು –ಸಣ್ಣಯ್ಯ**

**ವಯಸ್ಸು –39 ವರ್ಷಗಳು** ದಿನಾಂಕ 07–08–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಪಿ ಡಿ ಓ , ಹಲಗನಳ್ಳಿ ಗ್ರಾಮ ಪಂಚಾಯಿತಿ , ಪಿರಿಯಾಪಟ್ಟಣ ತಾಃ**

**ವಾಸಸ್ಥಳ –ಹಲಗನಳ್ಳಿ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಏಪ್ರಿಲ್ 2014 ರಿಂದ ಜೂನ್ 2022 ರವರೆಗೆ ಪಿರಿಯಾಪಟ್ಟಣ ತಾಃ ದೊಡ್ಡಬ್ಯಾಲಾಳು ಗ್ರಾಮ ಪಂಚಾಯಿತಿಯಲ್ಲಿ ಪಿ ಡಿ ಓ ಆಗಿ ಸೇವೆ ಸಲ್ಲಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಕೋರಿಕೆಯ ಮೇರೆಗೆ ದೊಡ್ಡಬ್ಯಾಲಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಬ್ಯಾಲಾಳು ಗ್ರಾಮದ ಒಂದು ನಿವೇಶದ ಬಗ್ಗೆ ಆರೋಪಿತರಿಗೆ ಮತ್ತು ಫಿರ್ಯಾದುದಾರರ ಮಧ್ಯ ತಕರಾರು ಇದ್ದು, ಸದರಿ ಜಾಗದ ಬಗ್ಗೆ ಯಾರ ಹೆಸರಿನಲ್ಲಿದೆ ಎಂದು ಮಾಹಿತಿ ಕೇಳಿದ್ದರು. ನಾನು ಸ್ಥಳ ಪರಿಶೀಲನೆ ಮಾಡಿ, ಸದರಿ ನಿವೇಶನವು ಚಾಸಾ–2 ರವರ ಹೆಸರಿಗೆ ಇಲ್ಲ ಎಂದು ಪತ್ರ ಮುಖೇನ ಮಾಹಿತಿ ನೀಡಿದ್ದೇನೆ. ನಾನು ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಪೊಲೀಸರು ಪಂಚನಾಮೆ ಮಾಡಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–9 ಎಂದು ಸಾಕ್ಷಿಯ ಸಹಿಯನ್ನು ನಿಪಿ–9(ಎ) ಎಂದು ಗುರುತಿಸಲಾಯಿತು. ಕವಚ ಪತ್ರವನ್ನು ನಿಪಿ–10 ಎಂದು ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು.

**SC No.278/2021**
**PW.11**

**ಪಾಟೀಸವಾಲುಃ– ಆರೋಪಿ ಪರ ಶ್ರೀ ಕೆ ಎ / ಎಸ್ ಪಿ ವಕೀಲರಿಂದಃ–**

ಚಿಕ್ಕಬ್ಯಾಲಾಳು ಗ್ರಾಮಕ್ಕೆ ನಾನು ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಮ್ಮ ಕಛೇರಿಯ ದಾಖಲೆಗಳನ್ನು ನೋಡಿ ನಿಪಿ–10 ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ನಿಪಿ–9 ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲಿಸೀರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.